ಸ್ಪರ್ಧೆ ಏರ್ಪಡಿಸಿತ್ತು. ಎಲ್ಲಾ ಕಾಲೇಜು ಆಡಳಿತ ಮಂಡಳಿಯಂತೆಯೇ ನಮ್ಮ ಕಾಲೇಜು ಮಂಡಲಿಯವರು ನಮ್ಮ ಕಾಲೇಜಿಗೆ ಈ ಬಾರಿಯ ಬಹುಮಾನ ಬರಬೇಕು ಎಂದು ತೀರ್ಮಾನಿಸಿದರು. ಅದರ ಸಂಪೂರ್ಣ ಜವಾಬ್ದಾರಿಯನ್ನು ನನ್ನ ತಲೆಗೆ ಕಟ್ಟಿದರು. ನಾನು ಮೊದಲ ಸುತ್ತಿನಲ್ಲಿ ಅನೇಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಅಂತಿಮವಾಗಿ ಅದರಲ್ಲಿ ಇಬ್ಬರನ್ನು ಆಯ್ಕೆ ಮಾಡಿದೆ. ಮಂಡಳಿಯ ಮುಂದೆ ಇಬ್ಬರನ್ನೂ ಹಾಜರುಪಡಿಸಿದೆ. ಅದರಲ್ಲಿ ಒಬ್ಬಳು ತನ್ನ ಸಂಗೀತ ಜಾಣ್ಮೆಯ ಬಗ್ಗೆ, ತನ್ನ ಗುರುಗಳ ಬಗ್ಗೆ, ತಾನು ಇದುವರೆಗೂ ಭಾಗವಹಿಸಿರುವ ಗೋಷ್ಠಿಗಳು, ಸ್ಪರ್ಧೆಗಳ ಬಗ್ಗೆ ಎಷ್ಟು ಚೆನ್ನಾಗಿ ಹೇಳಿಕೊಂಡಳು ಎಂದರೆ ನಮ್ಮ ಕಾಲೇಜಿನ ಆಡಳಿತ ಮಂಡಳಿ ಅವಳಿಂದ ವಿಪರೀತ ಪ್ರಭಾವಕ್ಕೆ ಒಳಗಾಗಿ ಅವಳನ್ನು ಸ್ಪರ್ಧೆಗೆ ಕಳಿಸಿದರು.


ಇನ್ನೊಬ್ಬಳು ತನ್ನ ಬಗ್ಗೆ ಪರಿಚಯಿಸಿಕೋ ಎಂದದ್ದಕ್ಕೆ ತನ್ನ ತಾಯಿ, ಅಜ್ಜಿಯಿಂದ ಕಥೆ ಆರಂಭಿಸಿದವಳು ಅವಳವರೆಗೆ ಬರಲೇ ಇಲ್ಲ. ಸಂಗೀತಗಾರರಿಗೆ ಮುಖ್ಯವಾದದ್ದು ಮಾತಲ್ಲ. ಸಂಗೀತ. ನನಗೆ ಈ ಬಾಯಿಬಡಕಿಯನ್ನು ಆಯ್ಕೆ ಮಾಡಲು ಇಷ್ಟವಿರಲಿಲ್ಲ. ನನಗೆ ಗೊತ್ತಿತ್ತು ಅವಳು ಮಾತಾಡುವುದರಲ್ಲಿ ಇರುವಷ್ಟು ಜಾಣ್ಮೆಯನ್ನು ಸಂಗೀತದಲ್ಲಿ ತೋರಿಸಲ್ಲ ಎಂದು. ಆದರೂ ಅವಳನ್ನು ಅಂದು ಆಯ್ಕೆ ಮಾಡಲಾಯಿತು. ಅಂದು ಮಂಡಳಿ ಮಾಡಿದ ತಪ್ಪು ಕೆಲಸ ಎಂದರೆ ಅವರ ಸಂಗೀತ ಜ್ಞಾನದ ಪ್ರಾಯೋಗಿಕ ಪರೀಕ್ಷೆ ನಡೆಸಲೇ ಇಲ್ಲ. ಆದರೆ ಆ ಸ್ಪರ್ಧೆಯಲ್ಲಿ ಅವಳಿಗೆ ಪ್ರಶಸ್ತಿ ಬರಲೇ ಇಲ್ಲ. ಕಾರಣ ತನ್ನ ಬಗ್ಗೆ ಹೇಳಿಕೊಂಡಿದ್ದ ಹುಡುಗಿಗೆ ಇನ್ನೊಬ್ಬಳಷ್ಟು ಸಂಗೀತ ಒಲಿದಿರಲಿಲ್ಲ. ಯಥಾಪ್ರಕಾರ ಈ ಸೋಲಿನ ಜವಾಬ್ದಾರಿಯನ್ನು ನನ್ನ ಆಯ್ಕೆಗೆ ಕಟ್ಟಲಾಗಿತ್ತು.

ನಮ್ಮ ಕಾಲೇಜಿನಲ್ಲಿ ನಾವು ಐದಾರು ಜನ ಭಾಷಾ ವಿಭಾಗದ ಅಧ್ಯಾಪಕರಿದ್ದೇವೆ. ನಮ್ಮ ಮುಖ್ಯಸ್ಥರು ತಾವು ಮಾಡಿದ ಪ್ರತಿಯೊಂದು ವಿಷಯವನ್ನೂ ಚೆನ್ನಾಗಿ ಹೇಳಿಕೊಳ್ಳುತ್ತಾರೆ. ಅವರು ಪಾಪ, ಬಹಳ ಪ್ರಯಾಸ ಪಟ್ಟು ವಾರಕ್ಕೆ ಅತೀ ಹೆಚ್ಚು ತರಗತಿಗಳನ್ನು ತೆಗೆದುಕೊಳ್ಳುತ್ತಾರೆ. ಅವರಿಗೆ ವಾರಕ್ಕೆ ಭಾರಿಯಾದ 'ಎಂಟು ತರಗತಿಗಳು' ಎಷ್ಟು ಕಷ್ಟ! ಪಾಪ ತುಂಬಾ ಕೆಲಸ ಬೀಳುತ್ತದೆ! ತುಂಬಾ ಒತ್ತಡವಿರುತ್ತದೆ ಅವರಿಗೆ! ಆದರೆ ನಮಗೆಲ್ಲಾ ವಾರಕ್ಕೆ ಕೇವಲ ಹದಿನಾರರಿಂದ ಇಪ್ಪತ್ತು ತರಗತಿಗಳು ಮಾತ್ರ ಇರುತ್ತವೆ. ಹಾಗಾಗಿ ನಾವು ಏನೂ ಕೆಲಸ ಮಾಡದೇ ಓಡಾಡಿಕೊಂಡು ಇರುತ್ತೇವೆ ಎನ್ನುವುದು ಅವರ ಮಾತು. ಅವರೇ ಅವರ ಬಗ್ಗೆ ಹೇಳಿಕೊಳ್ಳುವುದರಿಂದ ಅವರನ್ನು ನಂಬುವಷ್ಟು ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿಯವರು ನಮ್ಮನ್ನು ನಂಬುವುದಿಲ್ಲ.

ಈಗ್ಗೆ ಕೆಲವು ವರ್ಷಗಳ ಹಿಂದೆ ಒಬ್ಬಳು ಹುಡುಗಿ ತರಗತಿಯಲ್ಲಿ ವಿಪರೀತವಾಗಿ ಮಾತನಾಡುತ್ತಿದ್ದಳು. ಓದಿನಲ್ಲಿ, ನೃತ್ಯದಲ್ಲಿ ಮುಂದಿದ್ದ ಹುಡುಗಿ ಎಲ್ಲಾ ಉಪಾಧ್ಯಾಯಿನಿಯರಿಗೂ ಸಿಂಹಸ್ವಪ್ನವಾಗಿದ್ದಳು. ಅವಳಿಗೆ ಸಂದೇಹಗಳು ಬರದೇ ಇದ್ದ ತರಗತಿ ಎಂದರೆ ಕೇವಲ ನನ್ನ ಕನ್ನಡ ತರಗತಿ. ಹಾಗಾಗಿ ಅವಳ ಮೇಲೆ ಕೋಪ ಇದ್ದ ಅನೇಕರು ಅವಳ ಪೋಷಕರನ್ನು ಕರೆಸಿ ಒಮ್ಮೆ ಮಾತನಾಡಬೇಕು ಎಂದು ನನ್ನಲ್ಲಿ ಅಲವತ್ತುಗೊಂಡರು. ನನಗೇನೂ ಆ ಮಗುವಿನ ಮೇಲೆ ಕೋಪವಿರದಿದ್ದರೂ ವಿದ್ಯಾರ್ಥಿಗಳು ಯಾವುದೇ ಸಂಸ್ಥೆಯಲ್ಲಿ ಶಾಶ್ವತರಲ್ಲ. ಅವರು ಇಂದು ಇರುತ್ತಾರೆ. ನಾಳೆ ಪದವಿ ಮುಗಿಸಿಕೊಂಡು ಹೊರಡುತ್ತಾರೆ. ನಾವು ಮಾತ್ರ ಅಧ್ಯಾಪಕರು ಅದೇ ಕಾಲೇಜಲ್ಲಿ ಗೂಟ ಹೊಡೆದುಕೊಂಡು ಇರುತ್ತೇವೆ. ಹಾಗಾಗಿ ಒಮ್ಮೊಮ್ಮೆ ಮುಲಾಜಿಗೆ ಬೀಳಬೇಕಾಗುತ್ತದೆ.

ಎಲ್ಲಾ ವ್ಯವಸ್ಥೆಯನ್ನು ಅವರೇ ಮಾಡಿದರು. ಅವರ ತಾಯಿ ಒಮ್ಮೆ ಬಂದರು. ಸೂರ್ಯ ನೆತ್ತಿಯನ್ನು ಸುಡುವ ಬಿಸಿಲಿನಲ್ಲಿ ಅವರು ನಮ್ಮ ಕಾಲೇಜಿಗೆ ಬಂದಿದ್ದರು. ನಾನು ಅವರೊಡನೆ ಮಾತಾಡುವಂತೆ ಇವರೆಲ್ಲಾ ಸೇರಿ ಖೆಡ್ಡಾವನ್ನು ಹಾಕಿದ್ದರು. ಎಲ್ಲರ ಪಾಠದ ಮೇಲೂ ಅವರ ತಾಯಿಯ ದೂರುಗಳಿದ್ದವು. ನಾನು ಅವರನ್ನು ಮಾತನಾಡಿಸಲು ಆರಂಭಿಸಿದೆ ಅಷ್ಟೇ. ಉಳಿದದ್ದೆಲ್ಲಾ ಅವರೇ ಮಾತನಾಡಿದರು. ಕಾಲೇಜಿನ ಗೇಟ್‌ಕೀಪರ್‌ನಿಂದ ಹಿಡಿದು ಪ್ರಾಂಶುಪಾಲರವರೆಗೆ ಯಾರೂ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ಇಲ್ಲಿ ನಿರ್ವಹಿಸುತ್ತಿಲ್ಲ ಎಂದು ಸೋದಾಹರಣವಾಗಿ ವಿವರಿಸಲು ಶುರುಮಾಡಿದರು. ಇಲ್ಲಿ ನಾನು ಗಮನಿಸಿದ್ದು ಎಂದರೆ ಅವರಿಗೆ ಇದೆಲ್ಲಾ ಗೊತ್ತಾದದ್ದು ತಮ್ಮ ಮಗಳಿಂದ. ಅವಳ ಎಲ್ಲಾ ಮಾತುಗಳನ್ನು ಅವರು ನಂಬಿದ್ದರು. ನಮ್ಮವರು ಅವರ ದೃಷ್ಟಿಯಲ್ಲಿ ಮಾಮೂಲಿನವರಾಗಿದ್ದರು. ಆಗ ನಾವೆಲ್ಲಾ ಅವರ ಮಗಳ ವಿರುದ್ಧ ಮಾತಾಡುವುದನ್ನು ಬಿಟ್ಟು ನಾವು ಆ ರೀತಿ ನಡೆದುಕೊಳ್ಳಲು ಏನು ಕಾರಣ ಎಂದು ನಮ್ಮನ್ನು ಬಣ್ಣಿಸಿಕೊಳ್ಳಬೇಕಾಯಿತು. ಅವರಿಗೆ ನಮ್ಮ ಬಗ್ಗೆ ನಂಬಿಕೆ ಮೂಡಿಸುವಷ್ಟರಲ್ಲಿ ಅಂದು ಸೂರ್ಯಾಸ್ತವೇ ಆಗಿತ್ತು.

ನನಗೆ 'ತನ್ನ ಬಣ್ಣಿಸಬೇಕು' ಎಂಬ ಮಾತಿಗೆ ಒಳ್ಳೆಯ ಸಮರ್ಥನೆ ಸಿಕ್ಕಿದ್ದು ನನಗೆ ಮಕ್ಕಳಾದ ಮೇಲೆ. ನನ್ನ ಮಗ ಚಿಕ್ಕಪುಟ್ಟ ಕಾರ್ಯಗಳನ್ನು ಮಾಡಿ ಅವುಗಳನ್ನು ಕೊಚ್ಚಿಕೊಳ್ಳುತ್ತಾನೆ. ಹಾಗಾಗಿ ಎಲ್ಲೆಡೆಯೂ ಅವನಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಕಾರ್ಯ ಕಾರಣ ಸಂಬಂಧವನ್ನು ಅವನಷ್ಟು ಬಣ್ಣಿಸುವ ಆ ವಯಸ್ಸಿನ ಹುಡುಗರನ್ನು ನಾನು ನೋಡಿಯೇ ಇಲ್ಲ. ಆದರೆ ಅವನಿಗಿಂತ ಎರಡು ವರ್ಷದ ಹಿರಿಯಕ್ಕ ಇದರಲ್ಲಿ ಹೇಳಿಕೊಳ್ಳುವುದು ಏನಿದೆ? ಎಂದು ಮಾತು ಮುಗಿಸುತ್ತಾಳೆ. ಹಾಗಾಗಿ ಅವಳೆಂದರೆ ಅಷ್ಟಕ್ಕಷ್ಟೇ. ತಮ್ಮ ಬಗ್ಗೆ ಹೇಳಿಕೊಳ್ಳುವುದರಿಂದಲೇ ತಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯಗಳು ಮೂಡುತ್ತವೆ ಎಂದು ಈಗಿನ ಸಣ್ಣ ಮಕ್ಕಳೂ ಕೂಡ ಬಲ್ಲರು. ಸುಳ್ಳು ಹೇಳಿ ಪಡೆದ ಜನಪ್ರಿಯತೆ ಕ್ಷಣಿಕ. ಆದರೆ ತನ್ನ ಬಣ್ಣಿಸಿಕೊಳ್ಳುವ ಜನರ ಪ್ರಾಮಾಣಿಕತೆ ಕೂಡ ಪ್ರಶ್ನಾತೀತ.



ಮಗನನ್ನು ಸರದಿಯಂತೆ ಒಮ್ಮೆ ಒಂದು ವಾರದ ಮಟ್ಟಿಗೆ ತರಗತಿಯ ಮಾನಿಟರ್ ಮಾಡಿದರು. ಅಂದು ಅವನು ಮನೆಗೆ ಬಂದೊಡನೆ ತನ್ನ ತಾಯಿಗೆ ತಾನು ಆ ವಾರ ಎಷ್ಟು ಬ್ಯುಸಿ ಇರುತ್ತೇನೆ. ಮನೆಯ ಯಾವ ಕೆಲಸವನ್ನೂ ಹೇಳಬಾರದು. ತರಗತಿಯಲ್ಲಿ ಎಷ್ಟೆಲ್ಲಾ ಜವಾಬ್ದಾರಿಗಳಿರುತ್ತವೆ ಎಂದೂ ಇದರಿಂದ ತನಗೆ ಎಷ್ಟು ಟೆನ್ಷನ್ ಎಂಬುದನ್ನು ತಿಳಿಸಿ ನನ್ನ ಹೆಂಡತಿಯನ್ನು ಕಂಗಾಲು ಮಾಡಿದ. ಅವನಕ್ಕ ತಾನು ತಿಂಗಳುಗಟ್ಟಲೇ ಮಾನಿಟರ್ ಆಗಿದ್ದವಳು ಎಂದೂ ಹೀಗೆ ಹೇಳಿಕೊಂಡಿರಲಿಲ್ಲ. ಕೇಳಿದರೆ ಇದೊಂದು ಸರದಿಯಂತೆ ಎಲ್ಲರಿಗೂ ಬರುವ ಒಂದು ಜವಾಬ್ದಾರಿ. ಇದೇನು ದೊಡ್ಡ ಪದವಿಯಲ್ಲ ಎಂದು ಮೂಗು ಮುರಿದಳು. ಇದು ನಮ್ಮ ವಿಶ್ವವಿದ್ಯಾಲಯಗಳಲ್ಲಿ ವಿಭಾಗದ ಮುಖ್ಯಸ್ಥರು ಹೇಗೆ ಕೊಂಡಾಟ ಮಾಡುತ್ತಾರೆ ಎಂಬುದನ್ನು ನೆನಪಿಸಿತು.

ಹೀಗೆ ತಾನು ಮಾನಿಟರ್ ಆಗಿದ್ದ ಒಂದು ವಾರದಲ್ಲಿ ತರಗತಿಯನ್ನು ಹೇಗೆ ನಿರ್ವಹಿಸುತ್ತಿದ್ದೆ ಎಂದು ಅವನು ಈಗಲೂ ಹೇಳಿಕೊಳ್ಳುತ್ತಾನೆ. ಹಲವಾರು ದಿನಗಳಿಂದ ತಮ್ಮ ತರಗತಿಗೆ ಸಿಂಹಸ್ವಪ್ನವಾಗಿದ್ದ ಮೂರು ಗಂಡು ಬೆಕ್ಕುಗಳನ್ನು ಹೇಗೆ ಒಂದೇ ಪೆನ್ಸಿಲ್‌ನಿಂದ ಈ ಕಡೆಗೆ ಕಾಲಿಡದಂತೆ ಮಾಡಿದ್ದೇನೆ ಎಂಬುದು ಇಂತಹ ಪ್ರಕರಣಗಳಲ್ಲಿ ಒಂದು. ಒಂದು ವಾರದಲ್ಲಿ ನೂರಾರು ಸಂಗತಿಗಳ ನಿರ್ವಹಣೆಯನ್ನು ಯಾವ ಮ್ಯಾನೇಜ್‌ಮೆಂಟ್ ಟೀಚರ್ ಕೂಡ ನಾಚುವಂತೆ ಹೇಳಿಕೊಳ್ಳುವುದರಿಂದ ಅವನ ಅಜ್ಜಿ ತಾತರಿಗೆ ಅವನೊಬ್ಬ ಹೀರೊ. ತನ್ನ ಪುಟ್ಟ ಕಂದಮ್ಮನಿಗೆ ಎಷ್ಟೊಂದು ಜವಾಬ್ದಾರಿ ಎಂದು ಅವರು ಬೀಗುತ್ತಾರೆ.

ಒಟ್ಟಿನಲ್ಲಿ ಇಂದು ಪ್ರತಿಯೊಬ್ಬರೂ ತಮ್ಮಷ್ಟಕ್ಕೆ ತಾವು ಚಿಪ್ಪಿನ ಒಳಗಡೆ ಮುದುಡಿಕೊಂಡಿರುತ್ತಾರೆ. ಅಂತಹದರಲ್ಲಿ ಕೆಲವೊಮ್ಮೆ ಇಂತಹ ಅಸಾಮಾನ್ಯರು ಅಲ್ಲಿಂದ ಸಿಡಿದೆದ್ದು ತಮ್ಮತನವನ್ನು ಗುರುತು ಮಾಡಿಕೊಳ್ಳುವುದರಲ್ಲಿ ತಪ್ಪೇನಿದೆ ಎಂಬ ಪ್ರಾಂಶುಪಾಲರ ಮಾತಿಗೆ ಉತ್ತರವಿಲ್ಲ. ಯಾರಿಗೂ ಯಾರೊಬ್ಬರ ಮೇಲೆಯೂ ಅಂತಹ ಅಭಿಮಾನ ಉಕ್ಕದೇ ಇರುವ ಕಾಲಘಟ್ಟವಿದು. ಯಾರನ್ನು ನೋಡಿದರೂ ತಕ್ಷಣ ಯೋಗ್ಯತೆಯನ್ನು ತಿಳಿಯದಾಗದು. ಇದರಲ್ಲಿ ಯಾವುದೇ ತಪ್ಪಿಲ್ಲ. ತಂದೆಯವರು ಹೇಳುತ್ತಿದ್ದ ಮಾತು ಮತ್ತೆ ಮತ್ತೆ ನೆನಪಿಗೆ ಬರುತ್ತದೆ. ಅಹಂಕಾರಕ್ಕೂ ಆತ್ಮವಿಶ್ವಾಸಕ್ಕೂ ಅಜಗಜಾಂತರವಾದ ವ್ಯತ್ಯಾಸವಿದೆ. ಇಲ್ಲದ್ದನ್ನೆಲ್ಲಾ ಹೇಳಿಕೊಳ್ಳುವುದು ಅಹಂಕಾರವಾದರೆ ಇದ್ದದ್ದನ್ನು ಹೇಳಿಕೊಳ್ಳುವುದು ಆತ್ಮವಿಶ್ವಾಸವಲ್ಲವೇ? ಸರ್ವರೊಳಗೊಂದೊಂದು ವಿದ್ಯೆಯನ್ನು ಕಲಿತರೂ ಇಂದಿಗೆ ಅಪೂರ್ಣವಾಗಿ ಉಳಿದಿರುವ ನಾವು ನಮ್ಮನ್ನು ಅಭಿವ್ಯಕ್ತಿಸಿಕೊಳ್ಳುವ ಮಾರ್ಗದಿಂದಲೇ ಏನನ್ನಾದರೂ ಸಾಧಿಸಬಹುದು ಎಂದರೆ ಯಾಕೆ ದೂರಬೇಕು ಅಲ್ಲವೇ. ತನ್ನ ಬಣ್ಣಿಸಬೇಕು ಎಂದು ಯಾವ ಮುಲಾಜೂ ಇಲ್ಲದೇ ಹೇಳಬಹುದು.

ಪ್ರತಿಕ್ರಿಯಿಸಿ: **feedback@sudha.co.in**